ಚೆರ್ಲಪಲ್ಲಿಗೆ ಅಂದು ಮುಖ್ಯಮಂತ್ರಿ ಬರುವ ಕಾರ್ಯಕ್ರಮ ಇದ್ದುದ್ದರಿಂದಲೂ, ಅದರ ಉಸ್ತುವಾರಿಯನ್ನು ವೇಮುಲಶಾಸ್ತ್ರಿಯ ಹೆಗಲಿಗೇರಿಸಿದ್ದರಿಂದಲೂ ಡ್ರೈವರ್ ಜೊತೆ ನಾನೊಬ್ಬನೇ ಏರ್‌ಪೋರ್ಟ್‌ಗೆ ಹೊರಟಿದ್ದೆ. ಬೆಳಗಿನ ಐದುವರೆಗೇನೇ ನಾವು ರಾತ್ರಿ ಊಟಕ್ಕೆ ಕುಳಿತಿದ್ದ ಮನೆಯ ಪಕ್ಕದ ಕಣದಲ್ಲಿ ಯಾವುದೋ ಸಿನಿಮಾದ ಶೂಟಿಂಗ್ ನಡೆಯುತ್ತಿತ್ತು. "ಈಗಿನ ಮುಖ್ಯ ಮಂತ್ರಿಗೂ ವೀರಾಂಜನೇಯರೆಡ್ಡಿಗೂ ಬಾರಿ ಗೆಳೆತನ. ಆದರೆ ಮುಖ್ಯಮಂತ್ರಿ ವೀರಾಂಜನೇಯರೆಡ್ಡಿ ಖುಷಿಯಾಗಿರುವುದಕ್ಕೆ ಬಿಡುವುದಿಲ್ಲ. ಈ ಮನೆಗೆ ವಾಸ್ತು ಸರಿಯಿಲ್ಲವೆಂದು ಕೆಲವರು ಹೇಳಿದರೆ ಮತ್ತೆ ಕೆಲವರು ಪರ್ಫೆಕ್ಟ್ ವಾಸ್ತು ಇದೆಯೆಂದು ಹೇಳುತ್ತಾರೆ. ಆದರೆ ಈ ಮನೆಯವರಿಗೆ ಮಾತ್ರ ಅದೇನೋ ವಾಸ್ತು ಬಗ್ಗೆ ನಂಬಿಕೆಯಿಲ್ಲ..." ಕಾರು ಹತ್ತಿಸುತ್ತಾ ಹೇಳಿದ್ದ ವಿಶ್ವನಾಥ ವೇಮುಲಶಾಸ್ತ್ರಿ.

"ಪ್ರಿನ್ಸ್ ಮಹೇಶ್ ಬಾಬು ಮತ್ತು ಶ್ರುತಿ ಹಾಸನ್ ಶೂಟಿಂಗ್‌ನಲ್ಲಿ ಇದ್ದಾರೆ. ಶ್ರೀಮಂತುಡು ಪಾರ್ಟ್ 2 ಸಿನಿಮಾ ಶೂಟಿಂಗ್. ಡ್ರೈವರ್ ಪಾತ್ರದಲ್ಲಿ ನಾನೂ ಮಾಡಿದ್ದೀನಿ. ಏನೇ ಆದ್ರೂ ಸಿನಿಮಾ ಹೀರೋ ಆಗೋದಿಕ್ಕೆ ಪುಣ್ಯ ಮಾಡಿರ್ಬೇಕು ಸಾರ್. ನನಗೆ ಚಿರಂಜೀವಿ ಅಂದ್ರೆ ಪಂಚಪ್ರಾಣ. ಆದರೆ ನಮ್ಮ ವೀರಾಂಜನೇಯರೆಡ್ಡಿ ಅಣ್ಣನಿಗೆ ಚಿರಂಜೀವಿ ಅಂದ್ರೆ ಅಷ್ಟಕ್ಕಷ್ಟೆ. ಹಿಂದೆ ನಡೆದ ಎಲೆಕ್ಷನ್ನಿನಲ್ಲಿ ಇಡೀ ಜಿಲ್ಲೆಯಲ್ಲಿ ಚಿರಂಜೀವಿ ಪಾರ್ಟಿಯ ಒಂದು ಸೀಟೂ ಗೆಲ್ಲೋಕೆ ಬಿಡ್ಲಿಲ್ಲ. ನೋಡಿದರೆ, ಚಿರಂಜೀವಿ ಇಲ್ಲಿ ಚುನಾವಣಾ ಪ್ರಚಾರಕ್ಕೆ ಬಂದಾಗ ಈ ಮನೆಯಲ್ಲಿಯೇ ಊಟ ಮಾಡಿ ಹೋಗಿದ್ದರು.'' ಡ್ರೈವರ್ ಅರ್ಧ ಖುಷಿಯಿಂದಲೂ ಅರ್ಧ ಬೇಸರದಿಂದಲೂ ಹೇಳಿದ್ದ. ವಿಮಾನ ನಿಲ್ದಾಣದಲ್ಲಿ ಇಳಿದಾಗ ಡ್ರೈವರ್‌ಗೆ ಒಂದು ಸಾವಿರ ಕೊಡಲು ಹೋದೆ. ಆತ ನಿರಾಕರಿಸಿ ಹೇಳಿದ್ದ:

"ಅಣ್ಣಾ ನನಗೇನೂ ಕಡಿಮೆ ಮಾಡಿಲ್ಲ ಸಾರ್. ಚಿಕ್ಕ ಹುಡುಗನಾಗಿನಿಂದಲೂ ಆ ಮನೆಯ ಋಣದಲ್ಲಿ ಬೆಳೆದಿರೋನು. ನನ್ನ ಮಗ ಚನ್ನಾಗಿ ಓದಿ ಅಮೆರಿಕದಲ್ಲಿ ತಿಂಗಳಿಗೆ ಎರಡು ಲಕ್ಷ ದುಡಿತಾ ಅವ್ನೆ. ನನಗೂ ತಿಂಗಳಿಗೆ ನಲವತ್ತು ಸಾವಿರ ಕಳಿಸ್ತಾನೆ. ಅದೆಲ್ಲ ಸಾಧ್ಯವಾಗಲು ಕಾರಣವಾಗಿದ್ದು ವೀರಾಂಜನೇಯರೆಡ್ಡಿ ಅಣ್ಣನವರು. ನಮ್ಮಂಥ ಸಾವಿರಾರು ಜನರಿಗೆ ಆ ಮನೆ ದೇವಸ್ಥಾನ ಇದ್ದಂಗೆ. ಅವರ ಜೊತೆ ಕುಳಿತು ಊಟ ಮಾಡೋ ನಿಮ್ಮಂತೋರೂ ದೇವ್ರಿದ್ದಂಗೆ ನಮಗೆ..." ಎಂದು ಕೈಜೋಡಿಸಿ ಕಾರು ಓಡಿಸಿಕೊಂಡು ಹೊರಟು ಹೋಗಿದ್ದ.

ಬೆಂಗಳೂರು ತಲುಪಿದ ಕೂಡಲೇ ಕುತೂಹಲ ತಡೆಯಲಾರದೆ ನಾನು ಡಾಕ್ಯುಮೆಂಟ್ ಇಟ್ಟುಕೊಂಡು ಐದಾರು ಜನ ಸ್ನೇಹಿತರನ್ನು ಜೊತೆಗಾಕಿಕೊಂಡು ವೀರಾಂಜನೇಯರೆಡ್ಡಿ ದಾನ ಮಾಡಿದ್ದ ಭೂಮಿಯ ಹತ್ತಿರ ಹೋಗಿದ್ದೆ. ಸ್ನೇಹಿತರು ನನ್ನ ಅದೃಷ್ಟವನ್ನು ಕೊಂಡಾಡಿದ್ದರು. ಲ್ಯಾಂಡ್ ಡೀಲಿಂಗ್ ಕೆಲಸಗಳಲ್ಲಿ ನಿರತನಾಗಿರುವ ನನ್ನ ಲಾಯರ್ ಸ್ನೇಹಿತ ಆ ಜಾಗದ ಪ್ರಸ್ತುತ ಮೌಲ್ಯ ಕನಿಷ್ಠ ಇಪ್ಪತ್ತು ಕೋಟಿಗಳೆಂದು ಹೇಳಿ ನನ್ನನ್ನು ಅಚ್ಚರಿಯಲ್ಲಿ ಮುಳುಗಿಸಿದ್ದ. ನನ್ನ ಹೆಂಡತಿ ಮಗ ಬಹಳ ಸಂಭ್ರಮ ಪಟ್ಟಿದ್ದರು. ಆದರೆ ಚೆರ್ಲಪಲ್ಲಿ ನರಸಿಂಹರೆಡ್ಡಿ ಹೇಳಿದ್ದ ಪ್ರತಾಪರೆಡ್ಡಿಯ ವಿಷಯವನ್ನು ಕೃಷ್ಣ ಮನೋಹರ್‌ಗೆ ಹೇಳಲು ಸಾಧ್ಯವಾಗಿರಲಿಲ್ಲ. ಕೊಲ್ಲಿಸಲು ಹೇಳುವುದು ನನಗೇಕೋ ಸರಿತೋರಿರಲಿಲ್ಲ. ನನ್ನ ಸ್ವಾರ್ಥ ನನಗೇ ಒಂದು ರೀತಿಯ ನಾಚಿಕೆಯನ್ನೂ, ಹೇಸಿಗೆಯನ್ನೂ ಹುಟ್ಟಿಸಿತ್ತು. ವಿಶಾಖಪಟ್ಟಣದಿಂದ ಬಂದು ಎರಡನೇ ದಿನವಾಗಿತ್ತು ಅದು. ಬಹುಶಃ ಪ್ರತಾಪಸಿಂಹರೆಡ್ಡಿಯ ವಿಚಾರಣೆ ಮುಗಿದಿರಬೇಕು. ನರಸಿಂಹರೆಡ್ಡಿ ಫೋನು ಮಾಡಿದರೆ ನನ್ನ ಸ್ನೇಹಿತ ಕೃಷ್ಣ ಮನೋಹರ್‌ಗೆ ಹೇಳಿದ್ದೆನೆಂದೂ, ಆದರೆ ಅವನು ಅಂಥ ಕೆಲಸಕ್ಕೆ ಒಪ್ಪಲಿಲ್ಲವೆಂದು ಸುಳ್ಳು ಹೇಳಿಬಿಡಲು ನಿರ್ಧರಿಸಿದೆ. ಇಂಥ ತೊಳಲಾಟದಲ್ಲಿರುವಾಗಲೇ ಕೃಷ್ಣ ಮನೋಹರನಿಂದ ಫೋನು!

"ಹಲೋ..." ಎಂದೆ.